ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಸ್ವಚ್ಛ ಭಾರತ
ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ




## ಕಲಬುರಗಿಯಲ್ಲಿ ಉತ್ತಮವಾಗಿ ಕಸ ಸಂಗ್ರಹಣೆ;

# ತ್ಯಾಜ್ಯ ಮಾರಾಟದಿಂದ ಗ್ರಾಮ ಪಂಚಾಯಿತಿಗಳಿಗೆ ವರಮಾನ!

ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯು ಗ್ರಾಮಗಳ ಸುಸ್ಥಿರ ಅಭಿವೃದ್ಧಿಯ ಭಾಗವಾಗಿದೆ. ಗ್ರಾಮಗಳನ್ನು ತ್ಯಾಜ್ಯ ಮುಕ್ತಗೊಳಿಸುವ ಪ್ರಯತ್ನದಲ್ಲಿ ಅನುಷ್ಠಾನಗೊಳಿಸಲಾದ ಕಾರ್ಯಚಟುವಟಿಕೆಗಳು ಗ್ರಾಮ ಪಂಚಾಯಿತಿಗಳ ಆರ್ಥಿಕ ಸ್ವಾವಲಂಬನೆಗೆ ಸಹಾಯಕವಾಗಿ ನಿಂತಿದೆ.

ಈ ನಿಟ್ಟಿನಲ್ಲಿ ಕಲಬುರಗಿ ಜಿಲ್ಲೆಯು ಮುಂದಿದ್ದು, ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿಗಳಲ್ಲಿ ಸಂಗ್ರಹವಾದ ತ್ಯಾಜ್ಯವನ್ನು ಮಾರಾಟ ಮಾಡಿ

**₹4.08 ಲಕ್ಷ ವರಮಾನ ಗಳಿಸಿವೆ.**

ಕಲಬುರಗಿ ಜಿಲ್ಲೆಯ 261 ಗ್ರಾಮ ಪಂಚಾಯಿತಿಗಳ ಪೈಕಿ 54 ಪಂಚಾಯಿತಿಗಳಲ್ಲಿ ಅತ್ಯುತ್ತಮ ರೀತಿಯಲ್ಲಿ ಕಸ ಸಂಗ್ರಹಣೆ ಕಾರ್ಯ ನಡೆಯುತ್ತಿದೆ. ಸಂಗ್ರಹವಾದ ಹಸಿ ತ್ಯಾಜ್ಯದಿಂದ ತಯಾರಿಸಲಾದ ಸಾವಯವ ಗೊಬ್ಬರ ಹಾಗೂ ಒಣ ಕಸವನ್ನು ಮಾರಾಟ ಮಾಡಿ ಪಂಚಾಯಿತಿಗಳು ಲಕ್ಷಾಂತರ ರೂ. ಆದಾಯ ಗಳಿಸಿವೆ. ಆ ಮೂಲಕ ಕಸದಿಂದ ರಸ ತೆಗೆಯುವ ಕಾರ್ಯಕ್ಕೆ ಮುಂದಡಿ ಇಟ್ಟಿವೆ. ಜೊತೆಗೆ ಗ್ರಾಮಗಳಲ್ಲಿ ರಸ್ತೆ ಬದಿ, ಸಾರ್ವಜನಿಕ ಸ್ಥಳಗಳು, ಜಲಮೂಲಗಳಿಗೆ ತ್ಯಾಜ್ಯ ಎಸೆಯುವ ಪರಿಪಾಠ ಸಂಪೂರ್ಣವಾಗಿ ನಿಂತಿದ್ದು, ಜನರಲ್ಲಿ ಸ್ವಚ್ಛತಾ ಪ್ರಜ್ಞೆ ಬೆಳೆದಿದೆ.

ಇನ್ನು ಕಲಬುರಗಿ ಜಿಲ್ಲೆಯ ಪಟ್ಟಣ, ಖಣದಾಳ, ರಟಕಲ್, ಹೆಬ್ಬಾಳ, ಹೊಳಕುಂದಾ, ಹರಸೂರ, ಭೀಮಳ್ಳಿ, ಅವರಾದ (ಬಿ), ಫತ್ತರಗಿ, ರಾವೂರ, ಭಂಕೂರ, ಗೋಳಾ (ಬಿ), ಚೌಡಾಪುರ, ದಿಗ್ಗಾಂವ, ಚಿಂಚನಸೂರ, ದೇವಲ ಗಾಣಗಾಪುರ, ಕಮಲನಗರ, ಕಡಗಂಚಿ, ನರೋಣಾ, ಹರವಾಳ, ಕೋಳಕೂರು ಗ್ರಾಮ ಪಂಚಾಯಿತಿ ಸೇರಿದಂತೆ 18 ಗ್ರಾಮ ಪಂಚಾಯಿತಿಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯ ಸಂಪನ್ಮೂಲ ನಿರ್ವಹಣಾ ಘಟಕಗಳನ್ನು ನಿರ್ಮಿಸಲಾಗಿದೆ.
ಪ್ರತಿ ಗ್ರಾಮಗಳಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ಈ ಘಟಕಗಳಿಗೆ ರವಾನಿಸಲಾಗುತ್ತದೆ. ನಂತರ ಕಸವನ್ನು ವಿಂಗಡಿಸಿ ಮಾರಾಟ ಮಾಡಲಾಗುತ್ತದೆ. **2025ರ ಮೇ ವರೆಗೆ 54 ಗ್ರಾಮ ಪಂಚಾಯಿತಿಗಳಲ್ಲಿ ಸಂಗ್ರಹವಾದ ಒಣ ತ್ಯಾಜ್ಯವನ್ನು ಮಾರಾಟ ಮಾಡಿ ₹4.08 ಲಕ್ಷ ವರಮಾನವನ್ನು ಪಂಚಾಯಿತಿಗಳು ಪಡೆದಿವೆ.**

## ಗ್ರಾಮ ಪಂಚಾಯಿತಿಗಳಿಗೆ ಸಾಹಸ್ ಸಂಸ್ಥೆ ಸಹಯೋಗ

ಗ್ರಾಮ ಪಂಚಾಯಿತಿಗಳಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ಮಾರಾಟ ಮಾಡಲು ಸಾಹಸ್ ಸಂಸ್ಥೆಯೂ ಗ್ರಾಮ ಪಂಚಾಯಿತಿಗಳೊಂದಿಗೆ ಕೈ ಜೋಡಿಸುತ್ತಿದೆ. ಈ ಸಂಸ್ಥೆಯು ಕಸದಲ್ಲಿ ಸಂಗ್ರಹವಾಗುವ ವಸ್ತುಗಳ ಖರೀದಿದಾರರನ್ನು (ವೆಂಡರ್) ಗ್ರಾ.ಪಂ.ಗಳೊಂದಿಗೆ ಬೆಸೆಯುತ್ತದೆ. ಕಸ ಸಂಗ್ರಹವಾದಂತೆಲ್ಲ ಅವುಗಳಿಗೆ ಬೇಕಾದ ಖರೀದಿದಾರರನ್ನು ಸಂಪರ್ಕಿಸುವ ಮೂಲಕ ಸಂಸ್ಥೆಯು ಸಹಯೋಗ ನೀಡುತ್ತಿದೆ.

**ಮುಂದಿನ ದಿನಗಳಲ್ಲಿ ಕಲಬುರಗಿ ಜಿಲ್ಲೆಯ ಎಲ್ಲಾ 261 ಗ್ರಾ.ಪಂ.ಗಳಿಗೂ ಕಸ ಸಂಗ್ರಹ ಘಟಕಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು. ಹಸಿ ಕಸವನ್ನು ಸಂಸ್ಕರಿಸಿ ಗೊಬ್ಬರ ತಯಾರಿಸುವ ಯೋಜನೆಯೂ ಪ್ರಗತಿಯಲ್ಲಿದೆ**

**- ಭಂವರ್‌ಸಿಂಗ್ ಮೀನಾ**
ಜಿಲ್ಲಾ ಪಂಚಾಯಿತಿ ಸಿಇಒ, ಕಲಬುರಗಿ